ಭೂ ಕಂದಾಯ ಹಾಗೂ ಪರಿಹಾರ ಮನ್ನಾ

೫೭೭. ಶ್ರೀ ಜಿ.ಎಸ್. ಆಚಾರ್ (ಬೈಂದೂರು).—ಮಾನ್ಯ ಕಂದಾಯ ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಚಿಕ್ಕ ರೈತರಿಗೆ ಭೂ ಕಂದಾಯ ಮಾಫಿ ಹಾಗೂ ಭೂ ಸುಧಾರಣಾ ಕಾನೂನಿನನ್ವಯ ಪರಿಹಾರ ಮನ್ನಾ ಮಾಡಲಾಗುವುದು ಎಂಬ ಸರ್ಕಾರದ ಧೋರಣೆಯಂತೆ ಎಷ್ಟು ಜನ ರೈತರು ವಿಸಾಯ್ತಿ ಪಡೆದಿದ್ದಾರೆ ?

ಆ) ಚಿಕ್ಕಹಾಗೂ ದುರ್ಬಲ ರೈತರು ಹಾಗೂ ಮಾಜಿ ಗೇಣಿದಾರರು ಅಧಿಕವಾಗಿರುವ ಆ ಜಿಲ್ಲೆಗೆ ಆ ಕಾನೂನು ತತ್ವಶಃ ಅನ್ವಯವಾಗುವಂತೆ ಮಾಡುವ ಯೋಜನೆ ಸರ್ಕಾರದವರಲ್ಲಿದೆಯೇ ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು).—

ಅ) ಭೂ ಕಂದಾಯವನ್ನು ಮಾಫಿ ಮಾಡಲಾಗಿರುವ ರೈತರ ಸಂಖ್ಯೆ ೨,೦೨,೦೧೪ ಭೂ ಸುಧಾರಣಾ ಕಾನೂನಿನ್ವಯ ಪ್ರೀಮಿಯಂ ಮನ್ನಾ ಮಾಡಲಾಗಿರುವ ರೈತರ ಸಂಖ್ಯೆ ೪೧,೨೩೩.

ಆ) ಕಾನೂನನ್ನು ಆ ಜಿಲ್ಲೆಗೆ ಈಗಾಗಲೇ ಅನ್ವಯಿಸಲಾಗಿದೆ. ಸದರಿ ಕಾನೂನು ತತ್ವಶಃ ಹಾಗೂ ಅಕ್ಷರಶಃ ಆ ಜಿಲ್ಲೆಗೆ ಅನ್ವಯವಾಗಿದೆ.

ಐ.ಟಿ.ಡಿ.ಪಿ. ಕಾರ್ಯಕ್ರಮಗಳ ಬಗ್ಗೆ

೬೯೮. ಶ್ರೀಮತಿ ಸುಮಾ ವಸಂತ್ (ವೀರಾಜ ಪೇಟೆ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೊಡಗು ಜಿಲ್ಲೆಯಲ್ಲಿ ಐ.ಟಿ.ಡಿ.ಪಿ. ಮೇರೆಗೆ ೧೯೮೪–೮೫, ೧೯೮೫–೮೬ ರಲ್ಲಿ ತಾಲ್ಲೂಕುವಾರು ತೆಗೆದುಕೊಂಡ ಕಾರ್ಯಕ್ರಮವೇನು ? ಹಾಗೂ ಅದರ ಕಾರ್ಯ ವ್ಯಾಪ್ತಿಯೇನು ? (ಪೂರ್ಣ ವಿವರ ನೀಡುವುದು).

ಆ) ಜಿಲ್ಲೆಯಲ್ಲಿ ಅದು ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ ಎನ್ನುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೆ ?

ಇ) ವೀರಾಜ ಪೇಟೆ ಕ್ಷೇತ್ರದಲ್ಲಿ ಐ.ಟಿ.ಡಿ.ಪಿ. ಮತಿಯಿಂದ ಸಮರ್ಪಕವಾದ ಕೆಲಸ ನಿರ್ವಹಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಐ.ಟಿ.ಡಿ.ಪಿ. ಕಾರ್ಯ ವ್ಯಾಪ್ತಿಯು ಜಿಲ್ಲೆಯ ಮೂರು ತಾಲ್ಲೂಕುಗಳಾದ ಮಡಿಕೇರಿ, ವೀರಾಜ ಪೇಟೆ ಹಾಗೂ ಸೋಮವಾರ ಪೇಟೆ ಪ್ರದೇಶಗಳಲ್ಲಿನ ಗಿರಿಜನ ಸಾಂದ್ರತೆ ಇರುವಲ್ಲಿ ಸೀಮಿತವಾಗಿರುತ್ತದೆ. ವಿವರಗಳನ್ನು ಅನುಬಂಧಗಳು 'ಅ' ಮತ್ತು 'ಆ' ದಲ್ಲಿ ನಮೂದಿಸಿದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.